## ಡೈಮಂಡ್ ಪ್ರಿಯೆ



ಬಾಲಿವುಡ್ ನಟಿ ಹೇಮಮಾಲಿನಿಗೆ ವಜ್ರದ ಒಡವೆ ಬಹಳ ಇಷ್ಟವಂತೆ. ವಜ್ರದ ಉಂಗುರ, ನೆಕ್ಲೆಸ್‌ಗಳನ್ನು ಪ್ರತಿ ಕಾರ್ಯಕ್ರಮಗಳಿಗೂ ಧರಿಸುತ್ತಾರೆ. ವಜ್ರದ ಆಭರಣ ಒಂದು ರೀತಿಯ 'ಯುನಿಕ್ ಐಡೆಂಟಿಟಿ' ಕೊಡುತ್ತದೆ. 'ನನಗೆ ಮೊದಲ ವಜ್ರದ ಉಂಗುರವನ್ನು ತಂದೆ ಉಡುಗೊರೆಯಾಗಿ ನೀಡಿದ್ದರು. ನಾನು ಕೂಡ ವಜ್ರದ ಒಡವೆಗಳ ಸಂಗ್ರಹವನ್ನು ಇಟ್ಟುಕೊಂಡಿದ್ದೇನೆ' ಎನ್ನುತ್ತಾರೆ ಹೇಮಮಾಲಿನಿ.

ಇದನ್ನು ಮತ್ತೊಬ್ಬ ಪರಿಣತ ವಿನ್ಯಾಸಗಾರ ಪರಿಶೀಲನೆ ಮಾಡುತ್ತಾನೆ. ಇದನ್ನು ಪಾಲಿಶಿಂಗ್ ಮೆಷಿನ್‌ನಲ್ಲಿ ಪಾಲಿಶ್ ಮಾಡಿದ ಬಳಿಕ ಇದರ ಮೇಲೆ ವಜ್ರದ ಹರಳುಗಳನ್ನು ಕೂರಿಸುವ ಕೆಲಸ ನಡೆಯುತ್ತದೆ. ಒಡವೆ ಮೇಲೆ ಆಯ್ದ ವಜ್ರದ ಹರಳುಗಳನ್ನು ವಿನ್ಯಾಸಗಾರ ಒಂದೊಂದಾಗಿ ಅಳವಡಿಸಿ ಒಡವೆಗೆ ಅಂತಿಮ ರೂಪ ನೀಡುತ್ತಾನೆ. ಈಗ ಪರಿಪೂರ್ಣ ಆಭರಣ ಸಿದ್ಧ ಆದ ಹಾಗೆ.

### ಕಠಿಣಕ್ಕೆ ಅನ್ವರ್ಥ..

ಡೈಮಂಡ್ ಎಂಬ ಪದ ಅಡಮಸ್ (adamas) ಎಂಬ ಗ್ರೀಕ್ ಪದದಿಂದ ಬಂದಿದೆ. ಎಂದರೆ ಅತ್ಯಂತ ಗಟ್ಟಿ, ತುಂಡು ಮಾಡಲು ಅಸಾಧ್ಯವಾದ್ದು ಎಂದು ಅರ್ಥ. ಡೈಮಂಡ್ ಎಂದರೆ ಗ್ರೀಕರಲ್ಲಿ 'ಅವರ್ಣನೀಯ ಪ್ರೀತಿ' ಎಂಬ ಅರ್ಥ. ವಜ್ರ ತನ್ನ ಮಾಂತ್ರಿಕ ಗುಣಕ್ಕೆ ಹೆಸರುವಾಸಿ. ಗ್ರೀಕ್ ಚಿಂತಕ ಪ್ಲೇಟೊ ಪ್ರಕಾರ, ವಜ್ರ ಎಂದರೆ ಅದೊಂದು 'ದೈವಿಕ ಶಕ್ತಿ'. ಹೀಗಾಗಿ ಬಹಳ ಪ್ರಾಚೀನ ಕಾಲದಿಂದಲೂ ವಜ್ರ ತನ್ನ ಉತ್ಕೃಷ್ಟ ಗುಣವನ್ನು ಕಾಯ್ದುಕೊಳ್ಳುತ್ತಾ ಬಂದಿದೆ. ದುಬಾರಿ ಹರಳುಗಳಾದ ರೂಬಿ, ಎಮರಾಲ್ಡ್, ಹವಳ, ಮುತ್ತು.. ಎಲ್ಲಕ್ಕಿಂತ ವಜ್ರ ಅತ್ಯಂತ ಗಟ್ಟಿ. ಇದನ್ನು ಬೇಧಿಸುವುದು ಬಹಳ ಕಷ್ಟ.

ವಜ್ರದಲ್ಲಿ ಹಲವು ವೈವಿಧ್ಯಗಳಿದ್ದರೂ, ಕಲರ್ ಡೈಮಂಡ್ ಕೂಡ ಬಂದಿದ್ದರೂ ಅತ್ಯಂತ ಪಾರದರ್ಶಕವಾಗಿರುವ ವಜ್ರದ ಹರಳು ಬಳಸುವುದು ಒಳ್ಳೆಯದು. ಈ ವಜ್ರದ ಹರಳುಗಳಲ್ಲಿ ಗೆರೆಗಳಿರಬಾರದು, ತುಂಡಾಗಿರಬಾರದು ಎಂದು ಆಭರಣ ತಜ್ಞರು ಹೇಳುತ್ತಾರೆ.

ವಜ್ರದ ಖರೀದಿಯ ಬಗ್ಗೆಯೂ ಜನರಲ್ಲಿ ಕೆಲವು ನಂಬಿಕೆಗಳಿವೆ. 'ಪ್ರತಿ ಮಾಸದ ಶುಕ್ಲ ಪಕ್ಷದ ಶುಕ್ರವಾರದಂದು ವಜ್ರ ಖರೀದಿಗೆ ಸೂಕ್ತ; ಭರಣಿ ಹಾಗೂ ಪೂರ್ವಾಷಾಢ ನಕ್ಷತ್ರಗಳಲ್ಲಿ ವಜ್ರದ ಖರೀದಿ ಒಳ್ಳೆಯದು. ಹಾಗೆ ಖರೀದಿ ಮಾಡಿದರೆ ಅದು ದೀರ್ಘ ಬಾಳಿಕೆ ಬರುತ್ತದೆ' ಎಂಬುದು ಜನರ ನಂಬಿಕೆ.

ಇತಿಹಾಸ ಪ್ರಸಿದ್ಧ ಗುಲಾಬಿ ವಜ್ರ ಇತ್ತೀಚೆಗೆ ಸುದ್ದಿಯಲ್ಲಿದೆ. ಆಂಧ್ರಪ್ರದೇಶ ವಿಭಜಿತ ತೆಲಂಗಾಣದ ಗೋಲ್ಕೊಂಡಾ ಗಣಿಯಲ್ಲಿ ಉತ್ಖನನದ ಸಂದರ್ಭದಲ್ಲಿ ಈ ಗುಲಾಬಿ ವಜ್ರ ದೊರೆತಿದ್ದು, ವಿಶ್ವ ಪ್ರಸಿದ್ಧಿ ಪಡೆದುಕೊಂಡಿದೆ. 19.07 ಕ್ಯಾರೆಟ್‌ನ ಈ ವಜ್ರವನ್ನು 'ಗ್ರ್ಯಾಂಡ್ ಮಾಝುರಿನ್' ಎಂದು ಕರೆಯಲಾಗುತ್ತದೆ. 1642 ರಲ್ಲಿ ಫ್ರಾನ್ಸ್‌ನ ಅಧ್ಯಕ್ಷ ಕಾರ್ಡಿನಲ್ ಮಾಝುರಿನ್ ಅವರ ಹೆಸರನ್ನು ಈ ವಜ್ರಕ್ಕೆ ಇಡಲಾಗಿದೆ.

### ಕೊಹಿನೂರು ವಜ್ರ

ವಜ್ರದಲ್ಲೇ ಅತ್ಯಂತ ದೊಡ್ಡ ವಜ್ರ ಎಂದು ಹೆಸರಾದ ಕೊಹಿನೂರು ವಜ್ರದ ಬಗ್ಗೆ ಯಾರಿಗೆ ಗೊತ್ತಿಲ್ಲ? ಮಧ್ಯಯುಗದಲ್ಲಿ ಆಂಧ್ರಪ್ರದೇಶದ ಗುಂಟೂರು ಜಿಲ್ಲೆಯ ಗಣಿಯಲ್ಲಿ ಈ ವಜ್ರ ದೊರೆತಿದ್ದು, ಇದರ ಹಿಂದೆ ರೋಚಕ ಇತಿಹಾಸವೂ ಇದೆ. ಈ ವಜ್ರವನ್ನು ಮಧ್ಯಯುಗದಲ್ಲಿ ಕಾಕತೀಯ ಅರಸರ ಆರಾಧ್ಯ ದೇವತೆಯ ಕಣ್ಣಿನಂತೆ ಭಕ್ತರು ಕಾಣುತ್ತಿದ್ದರು ಎನ್ನುತ್ತದೆ ಇತಿಹಾಸ. ಸಿಖ್ ದೊರೆ ಮಹಾರಾಜ ರಣಜಿತ್ ಸಿಂಗ್ ಪಾಲಾದ ಈ ವಜ್ರ ಅಲ್ಲಿಂದ ಬ್ರಿಟಿಷರ ಕೈ ಸೇರಿತ್ತು. ಈಗ ಇದು ರಾಣಿ ಎರಡನೆ ಎಲಿಜಬೆತ್ ಕಿರೀಟದಲ್ಲಿದೆ.

ಅತ್ಯಂತ ದುಬಾರಿಯಾಗಿರುವ ಕೊಹಿನೂರು ವಜ್ರ ಒಟ್ಟು 105 ಕ್ಯಾರೆಟ್ ತೂಗುತ್ತದೆ. ಅನೇಕ ವರ್ಷಗಳ ಕಾಲ ಈ ವಜ್ರವನ್ನು ಟವರ್ ಆಫ್ ಲಂಡನ್‌ನಲ್ಲಿ ಸಾರ್ವಜನಿಕ ಪ್ರದರ್ಶನಕ್ಕೂ ಇಟ್ಟಿದ್ದರು. ಬ್ರಿಟಿಷರು ಇದನ್ನು ಕೊಂಡೊಯ್ದು ಲಾಗಾಯ್ತು ಸುಮಾರು 150 ವರ್ಷಗಳಿಂದ ತಮ್ಮ ಸುಪರ್ದಿಯಲ್ಲಿ ಇಟ್ಟುಕೊಂಡಿದ್ದಾರೆ. 1947ರಿಂದಲೂ ಕೊಹಿನೂರು ವಜ್ರವನ್ನು ಭಾರತಕ್ಕೆ ವಾಪಸ್ ತರುವ ಬಗ್ಗೆ ಚರ್ಚೆ ನಡೆಯುತ್ತಲೇ ಇದೆ. ಮೇಲಾಗಿ ಪಾಕಿಸ್ತಾನ, ಆಫ್ಘಾನಿಸ್ತಾನ, ಇರಾನ್ ದೇಶಗಳೂ ಕೊಹಿನೂರು ವಜ್ರ ತಮ್ಮ ಆಸ್ತಿ ಎಂದು ವಾದ ಮಾಡುತ್ತಿವೆ. ಇತ್ತೀಚೆಗೆ ಪ್ರಧಾನಿ ನರೇಂದ್ರ ಮೋದಿ ಬ್ರಿಟನ್ ಪ್ರವಾಸ ಕೈಗೊಂಡಾಗ ಕೊಹಿನೂರು ವಜ್ರವನ್ನು ಭಾರತಕ್ಕೆ ಮರಳಿ ಕೊಡುವಂತೆ ಆಗ್ರಹಿಸಿದ್ದು ಕೂಡ ಸುದ್ದಿಯಾಗಿತ್ತು.

### ವಜ್ರದ ನಿಕ್ಷೇಪಗಳು

ವಿಶ್ವದಲ್ಲಿ ರಷ್ಯಾ ಮತ್ತು ಆಫ್ರಿಕಾ ರಾಷ್ಟ್ರಗಳು ಅತ್ಯಂತ ಹೆಚ್ಚು ವಜ್ರದ ನಿಕ್ಷೇಪಗಳನ್ನು ಹೊಂದಿವೆ. ಬೆಲ್ಜಿಯಂ ಕೂಡ ಸುಮಾರು ಹದಿನೈದು ವರ್ಷಗಳ ಹಿಂದೆ ಯಥೇಚ್ಛವಾದ ವಜ್ರದ ನಿಕ್ಷೇಪಗಳನ್ನು ಹೊಂದಿತ್ತು. ಆದರೆ ಅದಾಗಿ ಗಣಿಗಳಲ್ಲಿ ವಜ್ರದ ತುಣುಕುಗಳು ಬರಿದಾದ ಕಾರಣ ಈಗ ಬೆಲ್ಜಿಯಂನಲ್ಲಿ ವಜ್ರದ ಗಣಿಗಾರಿಕೆ ನಡೆಯುತ್ತಿಲ್ಲ. ಆದರೆ ವಜ್ರ ಸಂಸ್ಕರಿಸುವ ಅನೇಕ ಘಟಕಗಳು ಇಂದಿಗೂ ಕಾರ್ಯನಿರ್ವಹಿಸಿ ವಿಶ್ವದಾದ್ಯಂತ ವರ್ತಕರಿಗೆ ಸಿಗುವಂತೆ ಮಾಡುತ್ತಿದೆ.

ಭಾರತ ವಿಶ್ವದಲ್ಲೇ ಅತೀ ದೊಡ್ಡ ವಜ್ರಗಳನ್ನು ಸಂಸ್ಕರಿಸುವ ಕೇಂದ್ರ ಎಂಬುದು ನಮ್ಮ ಹೆಗ್ಗಳಿಕೆ. ಮಧ್ಯಪ್ರದೇಶದ ಪನ್ನಾ ಡೈಮಂಡ್ ಮೈನ್ಸ್, ಆಂಧ್ರಪ್ರದೇಶದ ನಾರಾಯಣಪೇಟ್‌ನಲ್ಲಿ ವಜ್ರದ ನಿಕ್ಷೇಪಗಳಿವೆ ಎಂಬುದು ಪತ್ತೆಯಾಗಿದೆ. ಹೊಸ ಅನ್ವೇಷಣೆಯ ಪ್ರಕಾರ ಕರ್ನಾಟಕದ ಗುಲ್ಬರ್ಗದ ಶಹಾಪುರ ಬಳಿ, ರಾಯಚೂರಿನಲ್ಲಿ ವಜ್ರದ ನಿಕ್ಷೇಪಗಳು ಪತ್ತೆಯಾಗಿವೆ. ಜತೆಗೆ ತುಮಕೂರಿನ ಪಾವಗಡದಲ್ಲಿಯೂ ವಜ್ರದ ನಿಕ್ಷೇಪ ಇರುವುದನ್ನು ಭಾರತೀಯ ಭೂ ವಿಜ್ಞಾನ ಸರ್ವೇಕ್ಷಣಾಲಯ ಪತ್ತೆ ಹಚ್ಚಿದೆ.

### ಜನಪ್ರಿಯವಾದ ವಜ್ರಾಭರಣ

ವಜ್ರದೊಡವೆ ಅತ್ಯಂತ ದುಬಾರಿಯಾಗಿದ್ದರೂ ಇತ್ತೀಚೆಗೆ ಅದು ಮಧ್ಯಮ ವರ್ಗದ ಮಹಿಳೆಯರ ತಿಜೋರಿ ಸೇರುತ್ತಿದೆ. ಇದಕ್ಕೆ ಕಾರಣ ವಜ್ರದ ಆಭರಣದಲ್ಲಿ ಹಗುರವಾಗಿರುವ ಹೊಸ ಹೊಸ ವಿನ್ಯಾಸಗಳು ಬಂದಿರುವುದು.

ಬಿಳಿ ಹಾಳೆ ಮೇಲೆ ಒಡವೆ ವಿನ್ಯಾಸ ಮಾಡುವುದು

